ಕೈಯ್ಯಲ್ಲಿದ್ದ ವ್ಯಾನಿಟಿ ಬ್ಯಾಗುಗಳು ತುಂಡಾದವು. ಆದರೆ, ಸರಿಯಾಗಿ ಜಗಳವಾಡಿ ಬಾಯ್ತುಂಬ ಬೈದಾಡಲು ಅವರಿಗೆ ಸಮಯವಿರಲಿಲ್ಲ. ಯಾವ ಕ್ಷಣದಲ್ಲಿ ತಮ್ಮ ಸರದಿ ಬರುವುದೋ ಎಂಬ ಗಲಿಬಿಲಿಯಲ್ಲಿ ಗಂಡ ಹೆಂಡಿರು ಜೊತೆ ಜೊತೆಯಾಗಿ ತಮ್ಮ ಸೀಟುಗಳ ಹುಡುಕುತ್ತ ಮುಂದೆ ಮುಂದೆ ನಡೆದರು. ದಂಪತಿಗಳು ಮಾತ್ರ ಬರಬೇಕು ಮತ್ತು ಚಿಕ್ಕಪುಟ್ಟ ಮಕ್ಕಳು, ಮೊಬೈಲುಗಳನ್ನು ಜೊತೆಗೆ ತರಕೂಡದೆಂದು ಖಡಕ್ ಆದೇಶವಿತ್ತು. ದಂಪತಿಗಳಿಗೆ ಮಕ್ಕಳನ್ನು ಬಿಟ್ಟಿರುವುದು ಅಷ್ಟು ತೊಂದರೆಯಾಗಲಿಲ್ಲ. ಆದರೆ, ಮೊಬೈಲ್ ಬಿಟ್ಟಿರುವುದು ಉಸಿರುಗಟ್ಟಿಸುತ್ತಿತ್ತು. ಕೆಲವರಂತೂ ಎದೆಹಾಲು ಕುಡಿವ ಮಕ್ಕಳನ್ನೂ ಸಹ ಬಿಟ್ಟು ಬಂದಿದ್ದರು.

ಇದ್ದಕ್ಕಿದ್ದಂತೆ ಬಣ್ಣಬಣ್ಣದ ಬೆಳಕು ವೇದಿಕೆಯಲ್ಲಿ ಝುಗಮಗಿಸಿ ಕಣ್ಣು ಕೋರೈಸತೊಡಗಿತು. ಹಾಡೊಂದು ಅಬ್ಬರಿಸತೊಡಗಿತು. ಅದೆಲ್ಲಿದ್ದರೋ ಎನ್ನುವಂತೆ ಕಾರ್ಯಕ್ರಮ ನಡೆಸಿಕೊಡುವುದಕ್ಕೆ ನಿಯೋಜಿತರಾದ ನಟ ನಟಿ ಇಬ್ಬರು ಸ್ಟೆಪ್ಸ್ ಹಾಕುತ್ತ ಏಡಿಗಳಂತೆ ವೇದಿಕೆಯ ಮೇಲೆ ಅಡ್ಡಾದಿಡ್ಡಿಯಾಗಿ ನರ್ತಿಸತೊಡಗಿದರು. ಹಾಡು ಸಂಗೀತ ಹೇಗಿತ್ತೆಂದರೆ ಅಲ್ಲಿ ನೆರೆದಿದ್ದ ಸತಿಪತಿಯರು ಕುಂತಲ್ಲೆ ಎದ್ದುನಿಂತು ಚಪ್ಪಾಳೆ ತಟ್ಟುತ್ತ ನುಲಿಯೊಡಗಿದರು.

ಅಬ್ರಕಡಬ್ರ ಅಬ್ರಕಡಬ್ರ!
ಈ ಮಾಲಲ್ಲಿ ಗೋಲ್ಮಾಲಿಲ್ಲ
ಇಲ್ಲಿಲ್ಲದ ಮಾಲು ಏನೂ ಇಲ್ಲ
ಇಷ್ಟು ಸೋವಿ ಎಲ್ಲೂ ಇಲ್ಲ!
ಯಾರಿಗುಂಟು ಯಾರಿಗಿಲ್ಲ!
ಬಿಕಿನಿಯಿಂದ ಬುರ್ಕಾವರೆಗೆ
ಉಪ್ಪು ಸೊಪ್ಪು ಮೀನು ಮಾಂಸ
ಕತ್ತೆ ಹಾಲು ಕರಡಿ ಕೂದಲು
ಫಾರಿನ್ ಸೆಂಟು ಚೈನಿಸ್ ಪುಡ್ಡು
ಡೋಂಟ್ ವರಿ ಮೇಡಂ, ಕಡಿಮೆ ದುಡ್ಡು!
ತೊಟ್ಟಿಲ ಕಿಲಕಿಲ ಬೇಬಿಯಿಂದ
ತಲೆ ಅಲ್ಲಾಡುವ ಹಿರಿಯರವರೆಗೆ
ಏನು ಬೇಕು ಏನು ಬೇಡ
ಟಿವಿ ಮೊಬೈಲು ರೈತರ ಗೊಬ್ರ
ಅಬ್ರಕಡಬ್ರ ಅಬ್ರಕಡಬ್ರ!

ಹಾಡು ಮುಕ್ತಾಯಕ್ಕೆ ಬಂದಂತೆ ನಟ ನಟಿಯರಿಗಿಂತ ಜೋಡಿಗಳೇ ಉನ್ಮಾದಕ್ಕೊಳಗಾದವರಂತೆ ಮೈಮರೆತು ಕುಣಿಯತೊಡಗಿದರು. ಹಾಡು ನಿಂತು ಜೋಡಿಗಳು ಆಸೀನರಾಗಿ ಉಸಿರಾಟ ಮಾಮೂಲಾಗುವಷ್ಟರಲ್ಲಿ ನಟಿಯು ಇಂಪಾದ ಸ್ವರದಲ್ಲಿ ನಿರೀಕ್ಷೆಗೂ ಮೀರಿ ಆಗಮಿಸಿದ ದಂಪತಿಯರನ್ನು ಸ್ವಾಗತಿಸಿ ಶುಭ ಕೋರಿದಳು. ವೇದಿಕೆಯ ಅಕ್ಕಪಕ್ಕದಲ್ಲಿದ್ದ ಪರದೆಯ ಮೇಲೆ ಕ್ಷಣಕ್ಷಣಕ್ಕೆ ಯಾವ್ಯಾವೋ ಸರಕುಗಳ ಜಾಹೀರಾತು, ಹಾಡು, ಡ್ಯಾನ್ಸುಗಳು ಮಿಂಚಿ ಮಾಯವಾಗುತ್ತಿದ್ದವು. ನೂರಾರು ವರ್ಷ ಆಯಸ್ಸು ಕೊಡುವ ಔಷಧ, ಜಿಮ್ ಸಲಕರಣೆಗಳು, ಭಕ್ತಿ ಹೆಚ್ಚಿಸುವ ಊದಿನಕಡ್ಡಿ, ಹುಡುಗಿಯರನ್ನು ಆಕರ್ಷಿಸಿ ಬಲೆಗೆ ಬೀಳಿಸಿಕೊಳ್ಳುವ ಚಡ್ಡಿ ಬನಿಯನ್ನು ಸೋಪು ಸೆಂಟು, ಚಿರಯೌವ್ವನ ದಯಪಾಲಿಸುವ ನಾರುಬೇರು ಇತ್ಯಾದಿಗಳ ಸಾಲುಸಾಲು.

ಸಭಾಂಗಣದಲ್ಲಿ ಘೋಷಣೆಯಾಯಿತು: ಕಂಪ್ಯೂಟರ್ ಮೊದಲ ಜೋಡಿಯ ಸಂಖ್ಯೆ ಮತ್ತು ಹೆಸರುಗಳನ್ನು ಆಯ್ಕೆ ಮಾಡಿದ್ದೇ ತಡ ದೊಡ್ಡ ಪರದೆಯ ಮೇಲೆ ಅವರ ಫೋಟೊ ಸಮೇತ ವಿವರಗಳು ಝುಗಮಗಿಸತೊಡಗಿದವು. ಆ ದಂಪತಿಗಳು ಜೀವದ ಹಂಗು ತೊರೆದು ಒಂದೇ ಜಿಗಿತಕ್ಕೆ ವೇದಿಕೆಯೇರಿ ನಟ ನಟಿಯರ ಅಪ್ಪಿಕೊಳ್ಳುವುದು, ಕೈಕುಲುಕುವುದು ಮಾಡತೊಡಗಿದರು. ಅಷ್ಟಕ್ಕೇ ಸಮಾಧಾನವಾಗದೆ ಅವರನ್ನು ದೈವವೋ ಎಂಬಂತೆ ದೂರ ಸರಿದರೂ ಬಿಡದೆ ವೇದಿಕೆಯೆಲ್ಲ ಬೆರಸಾಡಿ ಪಾದಗಳಿಗೆ ಡೈವ್ ಹೊಡೆದರು. ದಂಪತಿಗಳ ಮುಖಗಳು ಊರಗಲವಾದವು. ಅವರಿಗೆ ಮಾತು ಹೊರಡದಂತಾದವು. ಕಿವಿಗಳು ನೋವಾಗುವಂತೆ ಚಪ್ಪಾಳೆ, ಶಿಳ್ಳೆ ಮತ್ತು ಕೇಕೆಗಳು ಸಭಾಂಗಣದಲ್ಲಿ ತುಂಬಿಹೋದವು. ಆಯ್ಕೆಯಾಗದ ಮಿಕ್ಕವರು ತಪ್ಪಿ ಹೋದ ಅವಕಾಶಕ್ಕೆ ತಮ್ಮ ಅದೃಷ್ಟವನ್ನು ಹಳಿಯುತ್ತ ನಿಟ್ಟುಸಿರು ಬಿಟ್ಟರು. ಆದರೂ ಮುಂದಿನ ಆಯ್ಕೆ

